**CW : 3**
**PW : 2**

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

# CC No. 475/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಗಿರಿಯಪ್ಪ ಪೂಜಾರಿ |
| ತಂದೆಯ ಹೆಸರು | : | ಮೈಲಪ್ಪ ಪೂಜಾರಿ |
| ಪ್ರಾಯ | : | 52 ವರ್ಷ |
| ಉದ್ಯೋಗ | : | ಆಸ್ಪತ್ರೆಯ ವಾರ್ಡ್ ಬಾಯ್ |
| ವಾಸಸ್ಥಳ | : | ಕೋಡಿಂಬಾಡಿ |

ದಿನಾಂಕಃ **18.12.2024**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ನಾನು ಶುಶ್ರುತ ಆಸ್ಪತ್ರೆಯಲ್ಲಿ ಕರ್ತವ್ಯವನ್ನು ಮುಗಿಸಿ ನಮ್ಮ ಮನೆಗೆ ಬೊಳುವಾರಿನಲ್ಲಿ ಇರುವ ಆಟೋದಲ್ಲಿ ಹೋಗುತ್ತಿದ್ದೆ. ನಾನು ಕೃಷ್ಣ ನಗರದ ಬಳಿ ಇದ್ದಾಗ ಸ್ಕೂಟರ್ ಆಟೋರಿಕ್ಷಾದ ಎದುರುಗಡೆ ಇದ್ದು, ಆಟೋರಿಕ್ಷಾವು ಸದರಿ ಸ್ಕೂಟರ್ ಗೆ ಡಿಕ್ಕಿಪಡಿಸಿರುತ್ತದೆ. ಸದರಿ ಡಿಕ್ಕಿಪಡಿಸಿದ ಪರಿಣಾಮ ಸ್ಕೂಟರ್ ಬಿದ್ದಿರುತ್ತದೆ. ನಾವು ಹೋಗುತ್ತಿದ್ದ ರಿಕ್ಷಾಕೂಡ ಪಲ್ಟಿಯಾಗಿರುತ್ತದೆ. ನಾನೂ ಕೂಡ ರಿಕ್ಷಾದಿಂದ ಬಿದ್ದಿರುತ್ತೇನೆ. ನನ್ನ ಬೆನ್ನಿಗೆ ಗಾಯವಾಗಿರುತ್ತದೆ. ಆ ದಿನ ರಿಕ್ಷಾದಲ್ಲಿ ಮೂರು ಜನ ಇದ್ದೆವು. ಅವರಿಗೂ ಕೂಡ ಗಾಯವಾಗಿರುತ್ತದೆ, ಒಬ್ಬರಿಗೆ ಕಾಲು ಮೂಳೆ ಮುರಿತಕ್ಕೊಳಗಾಗಿರುತ್ತದೆ. ಸ್ಕೂಟರಿನ ಸವಾರಳಿಗೂ ಸಹ ಕಾಲಿಗೆ ಪೆಟ್ಟಾಗಿರುತ್ತದೆ. ನಮ್ಮನೆಲ್ಲಾ ಮಹಾವೀರಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಸ್ಕೂಟರ್ ಸವಾರಳನ್ನು ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಸದರಿ ಅಪಘಾತವು ಆಟೋರಿಕ್ಷಾದ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸದರಿ ಪ್ರಕರಣದ ಆರೋಪಿಯನ್ನು ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನ ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾಗಿರುವ ನಿಪಿ.1 ಮತ್ತು 2ರಲ್ಲಿರುವ ಫೋಟೋ ಹಾಗೂ ಸಿಡಿಯನ್ನು ತೋರಿಸಿದ್ದು, ಅವರು ಅವುಗಳನ್ನು ನೋಡಿ ಆಗಿರಬಹುದು ಎಂದು ನುಡಿಯುತ್ತಾರೆ.

ಪಾಟಿಸವಾಲು ಆರೋಪಿ ಪರ ಶ್ರೀ ಎಂ.ಎಂ ವಕೀಲರಿಂದಃ

ನಾನು ಬೊಳುವಾರಿನಲ್ಲಿ ರಾಮಾಂಜನೇಯ ದೇವಸ್ಥಾನದ ಬಳಿ ಸಂಜೆ 6.30ಕ್ಕೆ ಆಟೋರಿಕ್ಷಾವನ್ನು ಹತ್ತಿರುತ್ತೇನೆ. ನಾನು ರಿಕ್ಷಾವನ್ನು ಹತ್ತಿದಾಗ ಒಟ್ಟು ಮೂರು ಜನರು ಇದ್ದೆವು. ಅವರು ಹೆಸರುಗಳು ನನಗೆ ಗೊತ್ತಿಲ್ಲ. ಅವರುಗಳ ಪರಿಚಯ ನನಗೆ ಇರಲಿಲ್ಲ. ಅವರಲ್ಲಿ ಚಾಸಾ.2 ರವರ ಪರಿಚಯ ನನಗೆ ಇತ್ತು. ರಿಕ್ಷಾ ಹೋಗುವಾಗ ಅದರ ಹಿಂದೆ ಮುಂದೆ ಬೇರೆ ವಾಹನಗಳು ಇತ್ತಾ ಎಂದರೆ ನಾನು ಅಷ್ಟೊಂದು ಗಮನಿಸಿ ನೋಡಿಲ್ಲ. ಬೊಳುವಾರಿನಿಂದ ಕೃಷ್ಣ ನಗರಕ್ಕೆ ಎಷ್ಟು ದೂರವಾಗುತ್ತದೆ ಎಂದು ನನಗೆ ನೆನಪಿಲ್ಲ. ಬೊಳುವಾರ್ ನಿಂದ ಕೃಷ್ಣ ನಗರಕ್ಕೆ ಬೇರೆ ಯಾವ ಪ್ರಯಾಣಿಕರೂ ಹತ್ತಿರಲಿಲ್ಲ. ರಿಕ್ಷಾದಲ್ಲಿ ಹತ್ತಿದವರು ಯಾರೂ ಕೂಡ ಕೃಷ್ಣ ನಗರದಲ್ಲಿ ಇಳಿದಿರಲಿಲ್ಲ. ಸದರಿ ಸ್ಕೂಟರ್ ನ್ನು ನಾನು ಅಪಘಾತವಾದ ನಂತರ ಶಬ್ಧ ಕೇಳಿದ ಬಳಿಕೆ ನೋಡಿರುತ್ತೇನೆ. ಅದಕ್ಕಿಂತ ಮೊದಲು ನಾನು ಅ ಸ್ಕೂಟರ್ ನ್ನು ನೋಡಿದ್ದಿಲ್ಲ. ಆ ಸ್ಕೂಟರ್ ನ ನಂಬರ್ ನನಗೆ ಗೊತ್ತಿಲ್ಲ. ಸದರಿ ಅಪಘಾತವು ನಾನು ರಿಕ್ಷಾ ಇಳಿಯುವ ಮೊದಲೇ ಆಗಿರುತ್ತದೆ. ರಿಕ್ಷಾವನ್ನು ಯಾರು ಚಲಾಯಿಸುತ್ತಿದ್ದರು ಎಂದರೆ, ಲಿಂಗಪ್ಪ ರವರು ಚಲಾಯಿಸುತ್ತಿದ್ದರು. ಸದರಿ ರಿಕ್ಷಾವು ಎಷ್ಟು ವೇಗದಲ್ಲಿ ಹೋಗುತ್ತಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಸದರಿ ಬೊಳುವಾರು ರಸ್ತೆ ಚೆನ್ನಾಗಿ ಇರಲಿಲ್ಲ, ರಸ್ತೆ ರಿಪೇರಿಯಲ್ಲಿ ಇತ್ತು ಎಂದರೆ, ನನಗೆ ಗೊತ್ತಿಲ್ಲ. ರಿಕ್ಷಾ ಚಾಲಕನ ತಪ್ಪಿನಿಂದಲೇ ಅಪಘಾತವಾಯಿತು ಎಂದು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ ಎಂದರೆ, ಸ್ಕೂಟಿಯವರು ಬಿದ್ದಿರುತ್ತಾರೆ, ಒಬ್ಬರು ತೀರಿಕೊಂಡಿರುತ್ತಾರೆ ಆದ ಕಾರಣ ಹೇಳುತ್ತಿದ್ದೇನೆ. ನನಗೆ ಯಾರು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ವಿಮಾ ಪರಿಹಾರವನ್ನು ಕೋರಿ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಿಕ್ಷಾ ಚಾಲಕನ ಯಾವುದೇ ತಪ್ಪು ಇಲ್ಲ, ಒಮ್ಮೆಲೆ ಸ್ಕೂಟರ್ ಸವಾರಳು ಸ್ಕೂಟರ್ ನ್ನು ರಸ್ತೆಯ ಎಡಗಡೆಗೆ ತಿರುಗಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ನಾನು ಆಗಲೇ ಹೇಳಿರುತ್ತೇನೆ, ಸೌಂಡ್ ಆದಾಗಲೇ ಅಪಘಾತವಾದ ವಿಚಾರ

**CW : 3**
**PW : 2**

ಗೊತ್ತಾಗಿರುತ್ತದೆ ಎಂದು. ರಿಕ್ಷಾಚಾಲಕನು ತನ್ನ ರಿಕ್ಷಾವನ್ನು ನಿಧಾನವಾಗಿ ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಈ ಘಟನೆಯಲ್ಲಿ ರಿಕ್ಷಾ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ವಿಮಾ ಪರಿಹಾರವನ್ನು ಪಡೆಯುವುದಕ್ಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನದ ರೀತ್ಯ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು